# ಸಮಾನತೆಯ ಹರಿಕಾರ ಬಸವಣ್ಣ

**ಗಾಯತ್ರಿ ಉಪ್ಪಾರ**

ಉಪನ್ಯಾಸಕರು, ಕನ್ನಡ ವಿಭಾಗ, ಆರ್.ಜಿ.ಎಸ್.ಪಿಯು ಕಾಲೇಜ್, ಚೆನ್ನಮ್ಮನ ಕಿತ್ತೂರ.

**Received: 24-11-2023 ; Acepted: 24-03-2024 ; Published: 13-08-2024**

**DOI: https://doi.org/10.5281/zenodo.13294390**

**ABSTRACT:**

ಬಸವಣ್ಣ 12ನೇಯ ಶತಮಾನದಲ್ಲಿ ಕನ್ನಡ ನಾಡಿನಲ್ಲಿ ಮನುಕುಲದ ಉದ್ಧಾರಕ್ಕಾಗಿ ಎಲ್ಲ ರಂಗದಲ್ಲಿಯೂ ಕ್ರಾಂತಿಗೈದ ಮಹಾನ್ ಪುರುಷ, ಕ್ರಾಂತಿಕಾರಿ. ಸಮಾಜದಲ್ಲಿನ ಅನಿಷ್ಟಗಳನ್ನು ತೆಗೆದುಹಾಕಲು ಶ್ರಮಿಸಿದರು. ವಚನಗಳ ಮುಖಾಂತರ ಸಮಾಜದ ಮಧ್ಯದಲ್ಲಿರುವ ಅನೇಕ ಸಮಸ್ಯೆಗಳಿಗೆ ಪರಿಹಾರ ನೀಡಲು ಜನರ ಮಧ್ಯ ದುಮುಕಿ ಜನಸಾಮಾನ್ಯರಿಗೆ ತಿಳಿಯುವ ಭಾಷೆಯಲ್ಲಿ ವಚನಗಳ ಮೂಲಕ ಸಮಾಜದ ಅಂಕು, ಡೊಂಕುಗಳನ್ನು, ಢಾಂಬಿಕತೆಗಳನ್ನು ಎಳೆ ಎಳೆಯಾಗಿ ಬಿಡಿಸಿ ತಿಳಿಗನ್ನಡ ವಚನಗಳ ಮೂಲಕ ನಿರೂಪಿಸಿದ ಮಹಾನ ನೇತಾರ. ಸದ್ಗುಣ ಸದಾಚಾರಗಳು ಯಾವುದೇ ಜಾತಿಗೆ ಮೀಸಲಾದವುಗಳಲ್ಲ ಇಲ್ಲವೆ ಹುಟ್ಟಿನಿಂದ ಬಂದವುಗಳೂ ಅಲ್ಲ. ಈ ಅಸ್ಪೃಶ್ಯತಾ ಭಾವನೆಯನ್ನು ಬಸವಣ್ಣನವರು ಸಂಪೂರ್ಣವಾಗಿ ತೆಗೆದುಹಾಕಿ ಸಮಾನತೆಯನ್ನು ತಮ್ಮ ಜೀವನದಲ್ಲಿ ಆಚರಣೆಗೆ ತಂದರು.

**KEYWORDS:**

ಮಹಾಮಾನವತಾವಾದಿ, ಬಸವಣ್ಣ , ಹೊಲೆಯ, ಜಾತಿಬೇಧ, ಸಾಮಾಜಿಕ ವ್ಯವಸ್ಥೆ.

ಬಸವಣ್ಣ ಕ್ರಿ.ಶ 1131 ರಲ್ಲಿ ಬಿಜಾಪೂರ ಜಿಲ್ಲೆಯ ಬಸವನ ಬಾಗೇವಾಡಿಯ ಇಂಗಳೇಶ್ವರ ಗ್ರಾಮದಲ್ಲಿ ಜನಿಸಿದರು. ತಂದೆ ಮಾದಿರಾಜ, ತಾಯಿ ಮಾದಲಾಂಬಿಕೆ. ವೈದಿಕ ಸಂಪ್ರದಾಯದಲ್ಲಿ ಹುಟ್ಟಿದರೂ ತನ್ನ ಹದಿನಾರನೆಯ ವಯಸ್ಸಿನಲ್ಲಿ ಜನಿವಾರವನ್ನು ಕಿತ್ತೆಸೆದು, ಬ್ರಾಹ್ಮಣ ಸಮಾಜದಿಂದ ಹೊರಬಂದು, ಆಧ್ಯಾತ್ಮಿಕ ದೃಷ್ಟಿಯ ಕ್ರಾಂತಿಕಾರಿ ಭಾವನೆಗಳನ್ನು ಸಮಾಜದ ಮೇಲೆ ಪ್ರತಿಬಿಂಬಿಸಿದರು.

ಧರ್ಮವನ್ನು ಕುರಿತು ಸಮರ್ಪಕ ಕಲ್ಪನೆಯನ್ನು, ಸಮಾಜ ರಚನೆಯ ಹಿತಕಾರಕ ತಳಹದಿಯನ್ನು, ನೈತಿಕ ಆಚರಣೆಯ ಸರಳ ಕ್ರಮವನ್ನು, ಸಾಹಿತ್ಯದ ಸವಿಯನ್ನು ಒದಗಿಸುವಲ್ಲಿ ಬಸವಣ್ಣನ ವಚನಗಳು ಮೌಲಿಕವಾಗಿವೆ.

ಜಾತಿಭೇದ ಅಸ್ಪೃಶ್ಯತೆಗಳಿಗೆ ಬಲಿಯಾಗಿ ಸಮಾಜವು ಜರ್ಜರಿತವಾಗಿತ್ತು. ಧಾರ್ಮಿಕ ಆಚರಣೆಯಲ್ಲಿ ಸ್ತ್ರೀಗೆ ಪುರುಷನಿಗೆ ಸಮಾನವಾದ ಅವಕಾಶವಿರಲಿಲ್ಲ. ನೂತನ ಸಮಾಜ ರಚನೆಯ ಉದ್ದೇಶದಿಂದ ಬಸವಣ್ಣ ಇಂತಹ ಪರಿಸ್ಥಿತಿಯ ವಿರುದ್ಧ ಕ್ರಾಂತಿಗೆ ತೊಡಗಿದ್ದ. ಬಸವಣ್ಣನವರು ರೂಪಿಸಿಕೊಂಡ ಸಾಮಾಜಿಕ ವ್ಯವಸ್ಥೆಯಲ್ಲಿ ಮತ-ವೃತ್ತಿ-ಲಿಂಗ ಭೇದಗಳೆಲ್ಲ ಅಳಿದು ಶಿವಭಕ್ತಿ ಸಾಧನೆಯೊಂದೇ ತಳಹದಿಯಾಯಿತು. ವಿಪ್ರ ಮೊದಲು

ಅಂತ್ಯಜ ಕಡೆಯಾಗಿ ಶಿವಭಕ್ತರನೆಲ್ಲ ಒಂದೇ ಎಂಬ ಅವರ ಉದಾರವಾದ ಮನೋಧರ್ಮ, ಕುಲ, ಜಾತಿ ರೂಢಮೂಲವಾದ ಪರಂಪರೆಗಳಿಗೆ ಮಹತ್ವ ಕೊಡದೆ ಗುಣ, ಯೋಗ್ಯತೆ, ಶೀಲಗಳಿಗೆ ಪ್ರಾಶಸ್ತ್ಯವಿತ್ತಿತು. ಮಾನವರಲ್ಲಿಯೇ ಒಂದು ವರ್ಗವನ್ನು ಹೊಲೆಯರೆಂದು ಮುಟ್ಟಿಸಿಕೊಳ್ಳದೆ ಊರ ಹೊರಗಿಟ್ಟು ನಡೆಸಿಕೊಳ್ಳುತ್ತಿದ್ದ ರೀತಿ ಅವರ ಮನಸ್ಸನ್ನು ಆಳವಾಗಿ ಕಲಕಿತು. ಹೊಲೆಯೆನ್ನುವುದು ಒಂದು ಜಾತಿಯಲ್ಲ, ಎಲ್ಲ ವರ್ಗದವರಲ್ಲಿಯೂ ಎಲ್ಲ ಸಮಾಜದಲ್ಲಿಯೂ ಅಂಥವರು ಇದ್ದೇ ಇದ್ದಾರೆ ಎಂದು ಹೇಳುತ್ತಾ:

**ಕೊಲುವನೇ ಮಾದಿಗ, ಹೊಲಸು ತಿಂಬುವನೇ ಹೊಲೆಯ!**
**ಕುಲವೇನೋ, ಅವಂದಿರ ಕುಲವೇನೋ?**
**ಸಕಲ ಜೀವಾತ್ಮರಿಗೆ ಲೇಸನೇ ಬಯಸುವ**
**ನಮ್ಮ ಕೂಡಲ ಸಂಗನ ಶರಣರೇ ಕುಲಜರು.**

ಸದ್ಗುಣ ಸದಾಚಾರಗಳು ಯಾವುದೇ ಜಾತಿಗೆ ಮೀಸಲಾದವುಗಳಲ್ಲ ಇಲ್ಲವೆ ಹುಟ್ಟಿನಿಂದ ಬಂದವುಗಳೂ ಅಲ್ಲ. ಈ ಅಸ್ಪೃಶ್ಯತಾ ಭಾವನೆಯನ್ನು ಬಸವಣ್ಣನವರು ಸಂಪೂರ್ಣವಾಗಿ ತೆಗೆದುಹಾಕಿ 'ಹೊಲೆಯ ಹೊಲಬಿಗನಾದರೆ ಅವನ ಹೊರೆಯಲಿಪ್ಪುದು ಲೇಸು ಕಂಡಯ್ಯಾ' ಎಂಬ ಹೀನ ಕುಲದಲ್ಲಿ ಜನಿಸಿದರೂ ಶಿವಭಕ್ತರಾದ ಡೋಹರ ಕಕ್ಕಯ್ಯಾ, ಮಾದಾರ ಚೆನ್ನಯ ಅವರನ್ನು ಹಿರಿಯರಂತೆ ಭಾವಿಸಿ ತಮ್ಮ ಜೀವನದಲ್ಲಿ ಅದನ್ನು ಆಚರಣೆಗೆ ತಂದರು.

ಅಂಗದ ಮೇಲೆ ಲಿಂಗವ ಧರಿಸಿದವರೆಲ್ಲ ಕೂಡಲ ಸಂಗನೆಂದೇ ಅವರ ದೃಢವಾದ ಭಾವನೆ. ಭಕ್ತರೆಲ್ಲ ಒಂದೇ ಜಾತಿ, ಪರಸ್ಪರ ಸಮಾನರು. ಅವರ ವೃತ್ತಿ ಯಾವುದಾದರೂ ಆಗಿರಲಿ, ಲಿಂಗಧಾರಿಗಳಾಗುವ ಮೊದಲು ಯಾವ ಜಾತಿಯವರೇ ಆಗಿದ್ದಿರಲಿ ಅವುಗಳನ್ನು ಗಮನಿಸದೆ ಸಹಭೋಜನ, ವೈವಾಹಿಕ ಸಂಬಂಧಗಳು ಬೆಳೆದು ಬರುವಂತೆ ಪ್ರೇರೇಪಿಸಿದರು.

**ಉಂಬಲ್ಲಿ ಉಡುವಲ್ಲಿ ಕ್ರೀಯಳಿಯಿತೆಂಬರು**
**ಕೊಂಬಲ್ಲಿ ಕೊಡುವಲ್ಲಿ ಕುಲವನ ಅರಸುವರು**
**ಎಂತಯ್ಯಾ, ಅವರ ಭಕ್ತರೆಂಬೆ?**
**ಎಂತಯ್ಯಾ, ಅವರ ಯುಕ್ತರೆಂಬೆ?**

ಎಂಬ ಮಾರ್ಮಿಕವಾದ ಪ್ರಶ್ನೆಯಿಂದ ಅಂಥವರ ಮನಸ್ಸಿನ ಅಳುಕನ್ನು ನಿವಾರಿಸಿದರು. ಸ್ತ್ರೀಯರಿಗೆ ಪುರುಷನಂತೆಯೇ ಸಮಾನವಾದ ಹಕ್ಕುಗಳನ್ನು ಗೌರವವನ್ನು ನೀಡಿ, ಸಾಮಾಜಿಕವಾಗಿ, ಧಾರ್ಮಿಕವಾಗಿ, ಸ್ತ್ರೀ, ಪುರುಷರೊಡನೆ ಸಮಾನಳೆಂಬುದನ್ನು ಬಸವಣ್ಣನವರು ಎತ್ತಿ ಹಿಡಿದರು 'ಪರ ವಧುವನ್ನು ಮಹಾದೇವಿ' ಯೆಂದು ಕಂಡರು ಸ್ತ್ರೀಯರಿಗೂ ಲಿಂಗದೀಕ್ಷೆ ಮತ್ತು ಪಟ್‌ಸ್ಥಲ ಸಾಧನ ಮಾರ್ಗವನ್ನು ತೆರೆದು ಸಮಾನಾವಕಾಶವನ್ನು ನೀಡಿದರು. ಭಕ್ತಿಯ ಸಾಧನೆಯಲ್ಲಿ ಸತಿಪತಿಗಳೊಂದಾಗಿದ್ದರೆ ಅವರ ಬಾಳು ಸಫಲಗೊಳ್ಳುವುದು.

**ಗಂಡ ಶಿವಲಿಂಗ ದೇವರ ಭಕ್ತ; ಹೆಂಡತಿ ಮಾರಿಮಸಣಿಯ ಭಕ್ತೆ**

**ಗಂಡ ಕೊಂಬುದು ಪಾದೋದಕ ಪ್ರಸಾದ; ಹೆಂಡತಿ ಕೊಂಬುದು ಸುರೆಮಾಂಸ!**
**ಭಾಂಡ ಭಾಜನ ಶುದ್ಧ ಇಲ್ಲದವರ ಭಕ್ತಿ**
**ಹೆಂಡದ ಮಡಕೆಯ ಹೊರಗೆ ತೊಳೆದಂತೆ!**

**ಗಂಡನ ಮೇಲೆ ಸ್ನೇಹವಿಲ್ಲದ ಹೆಂಡತಿ,**
**ಲಿಂಗದ ಮೇಲೆ ನಿಷ್ಠೆಯಿಲ್ಲದ ಭಕ್ತ**
**ಇದ್ದರೇನೊ ಶಿವಶಿವಾ! ಹೋದರೇನೋ?**

'ಊಡದ ಆವಿಂಗೆ ಉಣ್ಣದ ಕರುವು ಬಿಟ್ಟಂತೆ' ಅಲ್ಲಿ ಸಾಮರಾಸ್ಯ ನೆಲೆಗೊಳ್ಳಲಾರದು.

**'ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ**
**ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ'**

ಎನ್ನುವಲ್ಲಿ ಯಾವ ಕೆಲಸವೂ ತನ್ನಷ್ಟಕ್ಕೆ ಮೇಲುಕೀಳಲ್ಲ ಎನ್ನುವುದನ್ನು ಸ್ಪಷ್ಟಪಡಿಸಿದ್ದಾರೆ. ದುಡಿಯದವನಿಗೆ ಜೀವಿಸುವ ಹಕ್ಕಿಲ್ಲ. ಸಮಾಜದಲ್ಲಿ ಕೆಲವರು ಕಷ್ಟಪಟ್ಟು ದುಡಿಯುವುದು, ಉಳಿದವರು ಅದರ ಫಲವನ್ನುಂಡು ಜೀವಿಸುವುದು ಸಲ್ಲದು. ಬಡವ ಬಲ್ಲಿದರೆನ್ನದೆ ಎಲ್ಲರೂ ದುಡಿದಾಗ ಸಮಾಜ ಸ್ವಯಂಪೂರ್ಣವಾಗುತ್ತದೆ. 'ಕಾಯಕಕ್ಕೆ' ಹೊಸ ಅರ್ಥವನ್ನು ಜೀವನ ಕಳೆಯನ್ನು ತುಂಬಿದ ಬಸವಣ್ಣನವರು ಲೌಕಿಕ-ಆಧ್ಯಾತ್ಮಗಳನ್ನು ಒಂದುಗೂಡಿಸಿದರು.

**ಉಳ್ಳವರು ಶಿವಾಲಯ ಮಾಡುವರು;**
**ನಾನೇನ ಮಾಡುವೆ? ಬಡವನಯ್ಯಾ**
**ಎನ್ನ ಕಾಲೇ ಕಂಭ, ದೇಹವೇ ದೇಗುಲ**
**ಸಿರ ಹೊನ್ನ ಕಳಸವಯ್ಯಾ**
**ಕೂಡಲ ಸಂಗಮ ದೇವ, ಕೇಳಯ್ಯಾ;**
**ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲಾ!**

ಇದಕ್ಕೆ ಹೊಂದಿಕೊಂಡಂತೆಯೇ ದೇವಾಲಯಗಳ ರೂಪದಲ್ಲಿ ನಡೆಯುವ ದುರುಪಯೋಗವನ್ನು ಶೋಷಣೆಯನ್ನು ತಡೆಹಿಡಿದರು. ದೇವಾಲಯ ಪ್ರವೇಶ ಸಾಮಾನ್ಯವಾಗಿ ಎಲ್ಲರಿಗೂ ಇಲ್ಲದಾಗಿ ಆ ಸಂಸ್ಥೆ ಸಂಪ್ರದಾಯಕ್ಕೆ ಕಟ್ಟುಬಿದ್ದು, ಹೆಚ್ಚಾಗಿ ಹಣವಂತರ ಅಧಿಕಾರಕ್ಕೆ ಅದು ಒಳಗಾಗಿರುವಾಗ ಬಸವಣ್ಣನವರ ಇಷ್ಟಲಿಂಗೋಪಾಸನೆಗೆ ಇನ್ನೂ ಹೆಚ್ಚಿನ ಅರ್ಥ ಒದಗುತ್ತದೆ. ಗುರು ನೀಡಿದ ಇಷ್ಟಲಿಂಗದಲ್ಲಿ ಕೈಯಲ್ಲೇ ಪರಮಾತ್ಮನನ್ನು ತಂದಿರಿಸಿ ಎಂಥ ಬಡವರಿಗೂ ಅವರವರ ಆತ್ಮಶಕ್ತಿಯ ವಿಕಾಸವನ್ನು ಸಾಧಿಸುವ ಸಹಜ ಸೌಲಭ್ಯವನ್ನು ಒದಗಿಸಿದರು.

ದೀನರನ್ನು, ಜಾತಿ ಹೀನರನ್ನು, ಬಡವರನ್ನು ಕಂಡು ಮರುಕಗೊಳ್ಳುತ್ತಿದ್ದ ಬಸವಣ್ಣನವರು ಶ್ರೀಮಂತರ ಸ್ವಭಾವವನ್ನು ಚೆನ್ನಾಗಿ ಅರಿತವರಾಗಿದ್ದರು.

**'ಏನಿ ಬಂದಿರಿ ಹದುಳವಿದ್ದಿರೆ?' ಎಂದರೆ**
**ನಿಮ್ಮ ಮಯಸಿರಿ ಹಾರಿ ಹೋಹುದೆ?**

**ಕುಳ್ಳಿರೆಂದರೆ ನೆಲ ಕುಳಿ ಹೋಹುದೆ?**
**ಒಡನೆ ನುಡಿದರೆ ಶಿರ-ಹೊಟ್ಟೆಯೊಡೆವುದೆ?**
**ಕೊಡಲಿಲ್ಲದಿದ್ದರೊಂದು ಗುಣವಿಲ್ಲದಿರ್ದಡೆ,**
**ಕೆಡಹಿ ಮೂಗ ಕೊಯ್ಯದೆ ಮಾಣ್ಬನೆ ಕೂಡಲ ಸಂಗಮ ದೇವನು?**

ಎಂದು ಕಟುವಾಗಿ ಕೇಳಿ, ಅಂಥವರ ಕಣ್ಣು ತರೆಯಿಸಿ ಮಾನವೀಯತೆಯ ಗುಣವನ್ನು ಬೆಳೆಸಿ, ಸಾಮಾಜಿಕ ಮೌಲ್ಯಗಳನ್ನು ಸಮುಚಿತವಾಗಿ ಬಿಂಬಿಸಿದ್ದಾರೆ.

**ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ;**
**ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ;**
**ತನ್ನ ಬಣ್ಣಿಸಬೇಡ ಇದಿರ ಹಳಿಯಲು ಬೇಡ,**
**ಇದೆ ಅಂತರಂಗ ಶುದ್ಧಿ , ಇದೇ ಬಹಿರಂಗ ಶುದ್ಧಿ ,**
**ಇದೇ ನಮ್ಮ ಕೂಡಲಸಂಗಮ ದೇವನೊಲಿಸುವ ಪರಿ!**

ಧರ್ಮದಲ್ಲಿ ಒಂದು ಮುಖ್ಯಭಾಗವಾದ ಸಮಾಜ ಹಿತಚಿಂತನೆಗೆ ನೀತಿಯೇ ನೆಲೆಗಟ್ಟು, ಆದುದರಿಂದ ಸದಾಚಾರ, ಸದವರ್ತನೆಗಳಿಗೆ ಬಸವಣ್ಣನವರು ಒತ್ತುಕೊಟ್ಟು ಹೇಳಿದ್ದಾರೆ. ನಿತ್ಯ ಜೀವನದಲ್ಲಿ ಅವರು ಪಾಲಿಸಬೇಕಾದ ನಿಯಮಗಳನ್ನು ಸರಳವಾಗಿ ಸುಲಭವಾಗಿ ಯಾವ ಅಧಿಕಾರದ ಸೋಂಕೂ ಇಲ್ಲದೆ ಅರ್ಥವಾಗುವಂತೆ, ಆಡಿದ ಮಾತು ವ್ಯರ್ಥವಾಗದಂತೆ ಆತ್ಮೀಯವಾಗಿ ಕಳಕಳಿಯಿಂದ ಒಡನುಡಿದಿದ್ದಾರೆ.

**ದಯವಿಲ್ಲದ ಧರ್ಮವದೇವುದಯ್ಯಾ?**
**ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿಯೂ;**
**ದಯವೇ ಧರ್ಮದ ಮೂಲವಯ್ಯ,**
**ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ!**

ಹೀಗೆ ಧರ್ಮ, ನೀತಿ, ಇಹ-ಪರಗಳ ಬಗೆಗೆ ಯಥಾರ್ತವಾದ, ಸರಳವಾದ ಕಲ್ಪನೆಯನ್ನು ಜನತೆಗೆ ಒದಗಿಸುವ ಕಾರ್ಯವನ್ನು ಬಸವಣ್ಣನವರು ಮಾಡಿದ್ದಾರೆ.

ಧರ್ಮದಲ್ಲಿ, ದಯೆಯಲ್ಲಿ, ಸಮಾಜ ಸುಧಾರಣೆಯ ಕಾರ್ಯದಲ್ಲಿ ಬಸವಣ್ಣನವರು ನಿಜವಾದ ಬೆಲೆಯನ್ನು ಕಂಡುಕೊಂಡರು. ವಿಶ್ವ ಶಾಂತಿಯ ಮೂಲತತ್ವಗಳನ್ನು ವಿಶ್ವಧರ್ಮದ ಮುಖ್ಯ ಲಕ್ಷಣಗಳನ್ನು ಬಸವಣ್ಣನವರ ಬಾಳಿನಲ್ಲಿ, ಬೋಧೆಯಲ್ಲಿ, ಬರಹದಲ್ಲಿ, ಸ್ಪಷ್ಟವಾಗಿ ಗುರುತಿಸಬಹುದು. 'ಸಕಲ ಜೀವಾತ್ಮರಿಗೆ ಲೇಸ ಬಯಸಿ' ಮನುಷ್ಯ ಕುಲ ಒಂದಾಗಿ ಬಾಳಬೇಕೆಂಬುದೇ ಅವರ ಹಂಬಲ. 'ಕಾಗೆ ಕೋಳಿಗಳಿಗಿಂತ ಕರಕಷ್ಟ' ವಾಗದೆ ತನ್ನರಿವೇ ತನಗೆ ಗುರುವಾಗಿ ಸಫಲವಾದ ತುಂಬುಜೀವನ ಆತನದಾಗಬೇಕೆಂಬುದೇ ಅವರ ರಚನೆಗಳಲ್ಲಿ ದೊರೆಯುವ ಧ್ವನಿಯಾಗಿದೆ. 'ಇವನಾರವ, ಇವನಾರವ, ಇವನಾರವ?' ಎಂದೆನಿಸದಿರಯ್ಯಾ, 'ಇವ ನಮ್ಮವ, ಇವ ನಮ್ಮವ, ಇವ ನಮ್ಮವ ನೆಂದೆನಿಸಯ್ಯಾ ಎಂಬುದೇ ಹೃದಯದ ಕೋರಿಕೆಯಾಗಿತ್ತು. ಶರಣರನೆಲ್ಲ ಕೂಡಲ ಸಂಗನೆಂದೇ ತಿಳಿಯುತ್ತ ಅವರ ಸೇವೆಯಲ್ಲಿಯೇ ಮುಕ್ತಿ ಸುಖವನ್ನು ಅನುಭವಿಸುತ್ತ ಮತ್ತಾವ ಪದವಿಯನ್ನೂ ಬಯಸದೆ, ಸದ್ಭಕ್ತರ ಪಾದವನರಿದಿಪ್ಪುದೇ ಮಹಾಪದವಿಯೆಂದು ಭಾವಿಸಿ ಭೂಲೋಕವನ್ನೆ ಕೈಲಾಸಕ್ಕಿಂತ ಹೆಚ್ಚೆಂದು ಭಾವಿಸಿದವರು. ಆದ್ದರಿಂದ ಬಸವಣ್ಣನವರನ್ನು

ಸಮಾಜ ಸುಧಾರಕ, ಸಮಾನತೆಯ ಹರಿಕಾರ ಎಂದು ಬಣ್ಣಿಸಲಾಗಿದೆ.

ಬಸವಣ್ಣ ಹಲವು ಮುಖಗಳುಳ್ಳ ವ್ಯಕ್ತಿತ್ವದ ಅಪೂರ್ವ ಮನುಷ್ಯ, ದೈವಭಕ್ತ, ಭಂಡಾರಿ, ಸಾಮಾಜಿಕ ಆಂದೋಲನಕಾರ, ಮಾನವತಾವಾದಿ, ಸಾಹಿತಿ ಇವುಗಳೆಲ್ಲ ಅವನಲ್ಲಿ ಮೇಳೈಸಿ ಅವನನ್ನು ಕರ್ನಾಟಕದ ಅಷ್ಟೆ ಏಕೆ ಭಾರತದ ಐತಿಹಾಸದಲ್ಲಿ ಚಿರಸ್ಥಾಯಿಗೊಳಿಸಿವೆ.

## ಪರಾಮರ್ಶನ ಗ್ರಂಥಗಳು:


1. ಚಿದಾನಂದ ಮೂರ್ತಿ ಎಂ. (2013). ವಚನ ಸಾಹಿತ್ಯ. ಸಪ್ನ ಬುಕ್ ಹೌಸ್. ಬೆಂಗಳೂರ.
2. ಮರುಳಸಿದ್ದಪ್ಪ ಕೆ. (2014). ವಚನ ಕಮ್ಮಟ. ಸಪ್ನ ಬುಕ್ ಹೌಸ್. ಬೆಂಗಳೂರು.
3. ಮುಗಳಿ ರಂ. ಶ್ರೀ. (2014) ಕನ್ನಡ ಸಾಹಿತ್ಯ ಚರಿತ್ರೆ. ಗೀತಾ ಬುಕ್ ಹೌಸ್. ಮೈಸೂರು.
4. ಹೊನ್ನು ಸಿದ್ದಾರ್ಥ ಸಿ. ಬಿ. (2014) ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ: ಸಂಪುಟ-3; ಭಾಗ-1. ಬೆಂಗಳೂರು ವಿಶ್ವವಿದ್ಯಾಲಯ. ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.